CCE RF/PF/RR/PR/NSR/NSPR(A)/666/027

**A**

# ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1

**MARCH/APRIL 2024 EXAMINATION-1**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]
Total No. of Questions : 25 ]

**CCE RF/PF/RR/PR/NSR/NSPR**
**FULL SYLLABUS**

Question Paper Serial No.

**ಸಂಕೇತ ಸಂಖ್ಯೆ : 28-K**
**Code No. : 28-K**

# ವಿಷಯ : ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : HINDUSTANI MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Fresh / Private Fresh / Regular Repeater / Private Repeater / NSR / NSPR)**

ದಿನಾಂಕ : 30. 03. 2024 ] [ Date : 30. 03. 2024

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ. ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**30. 03. 2024**

Tear here

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : 8 × 1 = 8

1. ದೇಸ ರಾಗದ ವಾದಿ ಸ್ವರ

(A) ನಿಷಾದ

(B) ರಿಷಭ

(C) ಗಾಂಧಾರ

(D) ಮಧ್ಯಮ

2. ಕರ್ನಾಟಕ ಸಂಗೀತವನ್ನು ದಕ್ಷಿಣಾದಿ ಸಂಗೀತವೆಂದು ಕರೆಯುವರು. ಏಕೆಂದರೆ, ಈ ಸಂಗೀತ ಪ್ರಕಾರವು

(A) ಉತ್ತರ ಭಾರತದಲ್ಲಿ ಬೆಳೆದು ಬಂದಿದೆ

(B) ದಕ್ಷಿಣ ಭಾರತದಲ್ಲಿ ಬೆಳೆದು ಬಂದಿದೆ

(C) ಭಾರತದಾದ್ಯಂತ ಬೆಳೆದು ಬಂದಿದೆ

(D) ಕರ್ನಾಟಕದಲ್ಲಿ ಮಾತ್ರ ಬೆಳೆದು ಬಂದಿದೆ

3. ಝುಪ್ತಾಳದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ

(A) 12

(B) 6

(C) 10

(D) 14

4. ಪಂಡಿತವಿಷ್ಣುನಾರಾಯಣ ಭಾತಖಂಡೆಯವರ ಜನ್ಮಸ್ಥಳ

(A) ಬಾಲಕೇಶ್ವರ

(B) ಪುರಂದರಗಡ

(C) ಯಲಿವಾಳ

(D) ಧಾರವಾಡ

5. ಭೀಮಪಲಾಸ್ ರಾಗವನ್ನು ಔಡವ–ಸಂಪೂರ್ಣ ರಾಗವೆಂದು ಕರೆಯಲು ಕಾರಣವೇನೆಂದರೆ, ಈ ರಾಗದ ಆರೋಹಣ ಮತ್ತುಅವರೋಹಣದಲ್ಲಿರುವ ಸ್ವರಗಳ ಸಂಖ್ಯೆ

(A) 6-7

(B) 5-7

(C) 6-6

(D) 5-5

6. ಸ್ವರಲಿಪಿ ಪದ್ಧತಿಯಲ್ಲಿ ಸಾಹಿತ್ಯಾಕ್ಷರದ ಮುಂದೆ 'S' ಆಕಾರದ ಚಿಹ್ನೆಯನ್ನು ಕೊಡಲಾಗುವುದು. ಏಕೆಂದರೆ

(A) ಸ್ವರವನ್ನು ಎಳೆದು ಹಾಡಲು

(B) ಸಾಹಿತ್ಯವನ್ನು ಎಳೆದು ಹಾಡಲು

(C) ಒಂದು ಮಾತ್ರಾ ಕಾಲದಲ್ಲಿ ಹಲವು ಸ್ವರಗಳನ್ನು ಹಾಡಲು

(D) ತಾಳದಲ್ಲಿ ಸಮ್ ಅನ್ನು ತೋರಿಸಲು

7. ಹಿಂದೂಸ್ಥಾನಿ ಸಂಗೀತದ ಪ್ರಸಿದ್ಧ ಗಾಯಕರು

(A) ಪುರಂದರದಾಸರು

(B) ಬಾಲಮುರಳಿ ಕೃಷ್ಣ

(C) ಭೀಮಸೇನ್ ಜೋಷಿ

(D) ಎಮ್.ಎಸ್. ಸುಬ್ಬಲಕ್ಷ್ಮಿ

8. ಕೊಳಲನ್ನು ಸುಷಿರವಾದ್ಯವೆಂದು ಕರೆಯುವರು. ಏಕೆಂದರೆ ಈ ವಾದ್ಯದಲ್ಲಿ ಸ್ವರವು

(A) ತಂತಿಗಳ ಮೂಲಕ ಉತ್ಪತ್ತಿಯಾಗುತ್ತದೆ

(B) ಗಾಳಿಯ ಸಹಾಯದಿಂದ ಉತ್ಪತ್ತಿಯಾಗುತ್ತದೆ

(C) ಚರ್ಮವನ್ನು ತಟ್ಟುವುದರಿಂದ ಉತ್ಪತ್ತಿಯಾಗುತ್ತದೆ

(D) ಲೋಹದಿಂದ ಉತ್ಪತ್ತಿಯಾಗುತ್ತದೆ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 8 × 1 = 8**

9. ತಾಳಲಿಪಿಯಲ್ಲಿ 'O' ಚಿಹ್ನೆಯನ್ನು ಬಳಸಲು ಕಾರಣವೇನು ?

10. ಜೌನಪುರಿ ರಾಗದ ಥಾಟನ್ನು ಹೆಸರಿಸಿ.

11. ಶ್ರವಣ ಸಾಧನ ವಿದ್ಯೆಯೆಂದು ಯಾವ ಕಲೆಯನ್ನು ಕರೆಯುತ್ತಾರೆ ?

12. ಖಯಾಲ್ ಪದದ ಅರ್ಥವನ್ನು ವ್ಯಾಖ್ಯಾನಿಸಿ.

13. ಬಿಬಾಸ್ ರಾಗದ ಗಾಯನ ಸಮಯವನ್ನು ಹೆಸರಿಸಿ.

14. ಮಾಲ್‌ಕೌನ್ಸ್ ರಾಗದ ಪಕ್ಕಡ ಸ್ವರಗಳನ್ನು ಬರೆಯಿರಿ.

15. ಸ್ಥಾಯಿ ಮತ್ತು ಅಂತರಾಕ್ಕಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

16. ಶುದ್ಧ ಸ್ವರ ಮತ್ತು ಕೋಮಲ ಸ್ವರಕ್ಕಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಗದಿಗಯ್ಯರವರು ಪಂಚಾಕ್ಷರಿ ಗವಾಯಿಗಳಾದುದು ಹೇಗೆ ? ವಿವರಿಸಿ.

18. ಪಂಡಿತ ಮಲ್ಲಿಕಾರ್ಜುನ ಮನ್ಸೂರರು ಉಚ್ಚಶ್ರೇಣಿಯ ಸಂಗೀತಗಾರರಾದುದು ಹೇಗೆ ? ವಿವರಿಸಿ.

19. ತೀನ್‌ತಾಳದ ಮಾಹಿತಿಯನ್ನು ಠೇಕಾದೊಂದಿಗೆ ಬರೆಯಿರಿ.

20. ರಾಗದಲ್ಲಿ ವಾದಿ ಸ್ವರವನ್ನು ರಾಜನ ಸ್ಥಾನಕ್ಕೆ ಹೋಲಿಸಲಾಗಿದೆ. ಏಕೆ ?

21. ಛೋಟಾ ಖಯಾಲ್‌ನ ಲಕ್ಷಣಗಳನ್ನು ವಿವರಿಸಿ.

22. ಭೈರವಿ ಮತ್ತು ಮಾಲ್‌ಕೌನ್ಸ್ ರಾಗಗಳಲ್ಲಿ ಕಂಡುಬರುವ ಎರಡು ಸಾಮ್ಯತೆಗಳನ್ನು ಬರೆಯಿರಿ.

23. ಈ ಕೆಳಗಿನ ರಾಗಗಳಲ್ಲಿ ರಾತ್ರಿ ಎರಡನೆಯ ಪ್ರಹರದಲ್ಲಿ ಹಾಡುವ ರಾಗಗಳನ್ನು ವಿಂಗಡಿಸಿ ಬರೆಯಿರಿ :

ಬಾಗೇಶ್ರೀ, ದೇಸ್, ತಿಲಂಗ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಪುರಂದರದಾಸರು ಕರ್ನಾಟಕ ಸಂಗೀತಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸಿ. **6**

25. ಭೈರವ್ ರಾಗದ ಸ್ವರಗೀತೆಯನ್ನು ಲಿಪಿಬದ್ಧಗೊಳಿಸಿ. **4**

DO NOT WRITE ANYTHING HERE